# ತರುಣರು ಮತ್ತು ನವ ಭಾರತ

ಸ್ವಾಮಿ ರಂಗನಾಥಾನಂದ

*ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರ ಹಲವು ಪ್ರವಚನಗಳನ್ನು 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಎಂಬ ೪ ಸಂಪುಟಗಳ ಗ್ರಂಥದಲ್ಲಿ ಕಾಣಬಹುದು. ಯುವಕರಿಗೆ ಸ್ಫೂರ್ತಿದಾಯಕವಾದ ಒಂದು ಪ್ರವಚನದಿಂದ ಆಯ್ದ ಕಲವು ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. (–ಸಂ.)*

ನಮ್ಮ ತರುಣ ಜನಾಂಗದಲ್ಲಿ ನಮ್ಮ ಸೃಜನಶೀಲ ಶಕ್ತಿ ಅಡಗಿದೆ. ನಮ್ಮ ಹಳೆಯ ತಲೆಮಾರಿನ ಜನಗಳು ಇಂದಿನ ಭಾರತವನ್ನೇ ಯಥಾವತ್ತಾಗಿ ಉಳಿಸಿಕೊಳ್ಳಬಯಸುತ್ತಾರೆ. ಏಕೆಂದರೆ, ಅವರು ಅದಕ್ಕೆ ಹೊಂದಿಕೊಂಡುಬಿಟ್ಟಿದ್ದಾರೆ. ಅದನ್ನು ಬದಲಾಯಿಸಲು ಅವರು ಇಷ್ಟಪಡುವುದಿಲ್ಲ. ಆದರೆ ನಾವು ನಮ್ಮ ಈ ಭಾರತವನ್ನು ಬದಲಾಯಿಸಬೇಕಾಗಿದೆ. ನಾವು ಆರೋಗ್ಯಪೂರ್ಣವಾಗಿರುವ ನವ ಭಾರತವನ್ನು ಸೃಷ್ಟಿಸಬೇಕಾಗಿದೆ. ಹೀಗಾಗಿ, ಸ್ವಾಮಿ ವಿವೇಕಾನಂದರು ತರುಣ ಜನಾಂಗದಲ್ಲಿ ನಂಬಿಕೆಯನ್ನಿರಿಸಿದ್ದರು. ಅವರು ಗುರುಗಳಾಗಿದ್ದ ಶ್ರೀರಾಮಕೃಷ್ಣರೂ ತರುಣ ಜನಾಂಗದಲ್ಲಿ ನಂಬಿಕೆಯನ್ನಿರಿಸಿದ್ದರು. ಅವರು ಹಳೆಯ ತಲೆಮಾರಿನಲ್ಲಿ ನಂಬಿಕೆಯನ್ನಿರಿಸಿಕೊಳ್ಳಲಿಲ್ಲ. ಏಕೆಂದರೆ, ಕೇವಲ ಶ್ರದ್ಧಾಭಕ್ತಿಗಳನ್ನುಳ್ಳ, ಕೇವಲ ಧಾರ್ಮಿಕ ಭಾವನೆಯುಳ್ಳ ಭಾರತಕ್ಕೆ ಬದಲಾಗಿ, ನಿಜವಾಗಿಯೂ ಆಧ್ಯಾತ್ಮಿಕವಾಗಿರುವಂಥ ಚೈತನ್ಯಶೀಲರೂ ಆಗಿರುವಂಥವರು ಮಾತ್ರವೇ ಅದನ್ನು ಸಾಧಿಸಬಲ್ಲರು ಎಂದು ಅವರು ನಂಬಿದ್ದರು. ನಮ್ಮ ತರುಣ ಜನಾಂಗದಲ್ಲಿ ಕೇವಲ ಮಾತುಗಾರರಲ್ಲದ, ಸಮರ್ಪಣ ಮನೋಭಾವದಿಂದ ಕೂಡಿದ, ಪ್ರಾಮಾಣಿಕರಾದ, ಶಕ್ತಿಪೂರ್ಣರಾಗಿರುವ ಹಾಗೂ ಪರಿಶುದ್ಧರಾಗಿರುವ ತರುಣರಲ್ಲಿ ಅವರು ಅಂಥ ಮನಸ್ಸನ್ನು ಕಂಡಿದ್ದರು. ಕಲ್ಕತ್ತ, ಮದರಾಸು, ಮತ್ತು ಇನ್ನಿತರ ಕಡೆಗಳಲ್ಲಿ ಮಾಡಿದ ತಮ್ಮ ಭಾಷಣಗಳಲ್ಲಿ ಸ್ವಾಮಿ ವಿವೇಕಾನಂದರು ಮತ್ತೆ ಮತ್ತೆ ಉಲ್ಲೇಖಿಸುತ್ತಿದ್ದುದು ಈ ಬಗೆಯ ತರುಣ ಜನಾಂಗವನ್ನು. ತರುಣರೂ, ಚೈತನ್ಯಶೀಲರೂ, ಸಮರ್ಪಣ ಮನೋಭಾವದವರೂ, ಆಶೆ-ಭರವಸೆಗಳಿಂದ ಪುಟಿಯುತ್ತಿರುವಂಥವರೂ ಆದ ಚೇತನಗಳನ್ನು ಈ ಬಗೆಯ ಮನಸ್ಸು ಮಾತ್ರವೇ ಭಾರತವನ್ನೇ ಬದಲಾಯಿಸಬಲ್ಲದು. ಇಂದು ಕಲ್ಕತ್ತೆಯಲ್ಲಿ, ಬಂಗಾಳದಲ್ಲಿ, ಭಾರತದ ಅದ್ಯಂತ ಇಂದು ನಮಗೆ ತುಂಬ ಬೇಕಾಗಿರುವುದು ಅಂಥ ಮನಸ್ಸುಗಳು. ಈ ವಿವೇಕಾನಂದ ಯುವ ಮಹಾಮಂಡಲದ ಉಗಮಕ್ಕೆ ಕಾರಣವಾಗಿರುವ ಸಂಗತಿ ಇದು.



## ಸಂಘಟನೆ

ಸಂಘಟನೆಯ ಶಕ್ತಿ , ಸಾಮೂಹಿಕ ಕ್ರಿಯೆಯ ಶಕ್ತಿ ಎಂಥದು ಎಂಬುದನ್ನು ಅವರು ಅಮೆರಿಕಾದಲ್ಲಿ ಕಂಡುಕೊಂಡಿದ್ದರು. ಭಾರತದ ಜನತೆ ಆ ಶಕ್ತಿಯನ್ನು ಪಡೆದುಕೊಳ್ಳಬೇಕು ಎಂದು ವಿವೇಕಾನಂದರು ಬಯಸಿದ್ದರು. ವಿವೇಕಾನಂದರು ರಾಮಕೃಷ್ಣ ಪಂಥವನ್ನು ಆರಂಭಿಸಿದ್ದೂ ಈ ಉದ್ದೇಶವನ್ನು ಇರಿಸಿಕೊಂಡೇ. ಮಾನವನಲ್ಲಿರುವ ದೇವನಿಗೆ ಸೇವೆಯನ್ನು ಸಲ್ಲಿಸುವ ಸಲುವಾಗಿ ನಮ್ಮ ಯುವಕರನ್ನು ಸಂಘಟಿಸುವುದು ಹೇಗೆ ಎಂಬ ಚಿಂತನೆಯೇ ಅದರ ಹಿಂದೆ ಅಡಗಿದೆ. ಇಲ್ಲೊಬ್ಬ ಸಂತ, ಅಲ್ಲೊಬ್ಬ ಸಂತ, ಅದೆಷ್ಟುಮಂದಿ ಸಂತರು ಮಹಾತ್ಮರು ನಮ್ಮಲ್ಲಿದ್ದಾರೆ! ಅವರೆಲ್ಲರೂ ಧರ್ಮ ಎಂದರೇನು ಎಂಬುದನ್ನು ಬೋಧಿಸುತ್ತಿದ್ದಾರೆ. ಒಳಿತನ್ನುಂಟುಮಾಡುತ್ತಿದ್ದಾರೆ. ನಿಜ. ಆದರೆ, ನಮಗೆ ಇಂದು ಹೆಚ್ಚು ಹೆಚ್ಚು ಶಕ್ತಿ, ಹೆಚ್ಚು ಹೆಚ್ಚು ಚೈತನ್ಯ ಬೇಕಾಗಿದೆ. ಅದಕ್ಕಾಗಿ ನಾವು ಈ ಎಲ್ಲ ಸಂತರನ್ನು, ಮಹಾತ್ಮರನ್ನು ಭ್ರಾತೃತ್ವದ ಭಾವನೆಯಲ್ಲಿ ಒಂದುಗೂಡಿಸೋಣ, ಆ ಬಳಿಕ ಅವರೆಲ್ಲರೂ ಒಂದುಗೂಡಿ ದುಡಿಯಲಿ, ಆಗ ಅದು ಸಮಾಜದ ಮೇಲೆ ಅದ್ಭುತವಾದ ಪರಿಣಾಮ

ವನ್ನುಂಟುಮಾಡುತ್ತದೆ ಎಂದು ಅವರು ಭಾವಿಸಿದ್ದರು. ಅದು ಪವಾಡಗಳನ್ನೇ ಎಸಗುತ್ತದೆ ಎಂದೂ ಅವರು ನಂಬಿದ್ದರು.

### ವಿವೇಕಾನಂದರ ಕಹಳೆಯ ಕರೆ

ಸ್ವಾಮಿ ವಿವೇಕಾನಂದರೇ ತಮ್ಮ ಒಂದು ಪತ್ರದಲ್ಲಿ ಹೀಗೆಂದು ಹೇಳಿದ್ದರು *(‘ಕೃತಿಶ್ರೇಣಿ’, ಸಂ.೫, ಪು. ೧೫)*

‘‘ಪವಿತ್ರತೆಯ ಉತ್ಸಾಹದಿಂದ ಉದ್ದೀಪಿತರಾಗಿರುವ, ಭಗವಂತನ ಬಗೆಗಿನ ದೃಢವಾದ ಭಕ್ತಿಯಿಂದ ಉತ್ತೇಜಿತರಾಗಿರುವ ಹಾಗೂ ಬಡವರ, ಪತಿತರ ಮತ್ತು ದಲಿತರ ಬಗೆಗಿನ ತಮ್ಮ ಸಹಾನುಭೂತಿಯಿಂದಾಗಿ ಸಿಂಹಸದೃಶ ಧೈರ್ಯದಿಂದ ಚೈತನ್ಯಯುಕ್ತರಾಗಿರುವ ಲಕ್ಷಾಂತರ ಮಂದಿ ಪುರುಷರು ಮತ್ತು ಮಹಿಳೆಯರು ಆತ್ಮೋದ್ಧಾರದ ಒಳ್ನುಡಿಯನ್ನು, ನೆರವಿನ ಒಳ್ನುಡಿಯನ್ನು, ಸಾಮಾಜಿಕ ಉತ್ಥಾನದ ಒಳ್ನುಡಿಯನ್ನು, ಸಮಾನತೆಯ ಸುವಾರ್ತೆಯನ್ನು ಬೋಧಿಸುತ್ತ ನಾಡಿನ ಉದ್ದ-ಅಗಲಕ್ಕೂ ಸಂಚರಿಸತೊಡಗುತ್ತಾರೆ.’’

ರಾಷ್ಟ್ರವನ್ನು ಕಟ್ಟುವ ಸಲುವಾಗಿ ಕೆಲಸಮಾಡಲು ಭಾರತದಲ್ಲಿ ಇಂದು ಬಹಳಷ್ಟು ಸಂಖ್ಯೆಯಲ್ಲಿ ನಮಗೆ ಅಗತ್ಯವಾಗಿರುವುದು ಈ ಬಗೆಯ ಯುವಜನರು ಮತ್ತು ಈ ಬಗೆಯ ಕಾರ್ಯ.

ತ್ಯಾಗ ಮತ್ತು ಸೇವೆಯ ಈ ಸಂದೇಶದಿಂದ ಪ್ರೇರಿತರಾಗಿರುವ ತರುಣರು ಮತ್ತು ತರುಣಿಯರು ಯಾವ ಕ್ಷೇತ್ರದಲ್ಲಿ ಬೇಕಾದರೂ — ಸಣ್ಣ ಅಂಗಡಿಯಲ್ಲಾಗಲೀ, ಕಛೇರಿಗಳಲ್ಲಾಗಲೀ, ಕಾಲೇಜುಗಳಲ್ಲಾಗಲೀ, ಎಲ್ಲಿ ಬೇಕಾದರೂ — ಕೆಲಸ ಮಾಡಲು ತೊಡಗಲಿ. ಆದರೆ ಅವರು ಸ್ವಾಮೀಜಿಯವರ ಮಹಾದರ್ಶನದಿಂದ ಹಾಗೂ ಆದರ್ಶದಿಂದ ಪ್ರೇರಿತರಾಗಿರಲಿ. ಹಾಗೆ ಮಾಡಿದಾಗ ಮಾತ್ರ ಅವರು ತಮಗೂ, ನಾಡಿಗೂ ಒಳಿತನ್ನು ಉಂಟುಮಾಡುತ್ತಾರೆ.

ನಮ್ಮ ಎಲ್ಲ ಪುರುಷರು ಮತ್ತು ಮಹಿಳೆಯರು ಘನತೆ-ಗೌರವಗಳಿಂದ ಕೂಡಿರುವ ಮಾನವೀಯ ಬದುಕನ್ನು ನಡೆಸಲು ಯೋಗ್ಯವಾದ, ಪ್ರಬಲವೂ ಸ್ಥಿರವೂ ಆದ ಭಾರತವನ್ನು ಸೃಷ್ಟಿಸಲು ಕಷ್ಟಪಟ್ಟು ದುಡಿಯಿರಿ.

*(‘ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು’, ಸಂ.೨, ಪು.೪೩೧-೩೪)* ***ಅನು : ಡಾ. ಪ್ರಧಾನ ಗುರುದತ್ತ***

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ಈಗ ಯಾರು ನಿಮ್ಮ ಕೃಪೆಯ ಲಾಭವನ್ನು ಪಡೆಯುವರೋ ಅವರು ಭಾಗ್ಯವಂತರೇ ಸರಿ. ಅನಂತರ ಯಾರು ಬರುತ್ತಾರೋ ಅವರ ಗತಿಯೇನು ?

**ಶ್ರೀಮಾತೆ :** ಅದೇಕೆ ಹಾಗೆ? ಅವರಿಗೆ ಕೃಪೆ ಲಭಿಸದೆ ? ಭಗವಂತ ಸರ್ವತ್ರ ಇದ್ದಾನೆ, ಎಲ್ಲ ಕಾಲದಲ್ಲೂ ಇದ್ದಾನೆ. ಶ್ರೀರಾಮಕೃಷ್ಣರು ಎಲ್ಲ ಕಾಲದಲ್ಲೂ ಇರುತ್ತಾರೆ. ಅವರ ಕೃಪೆಯಿಂದ ಎಲ್ಲವೂ ಲಭಿಸುವುದು. ಬೇರೆ ದೇಶಗಳಲ್ಲಿ ಭಗವಂತನ ಕೃಪೆ ಲಭಿಸುವುದಿಲ್ಲವೆ ?

**ಶಿಷ್ಯ :** ಭಗವಂತನಲ್ಲಿ ಪ್ರೀತಿ ಹುಟ್ಟಿದಾಗ ಅವನನ್ನು ಕಾಣಲು ಜೀವ ವ್ಯಾಕುಲಗೊಳ್ಳುವುದು. ನೀವು ನಮ್ಮನ್ನು ಪ್ರೀತಿಸುತ್ತಿಲ್ಲವೆ ?

**ಶ್ರೀಮಾತೆ :** ನಾನು ನಿನ್ನನ್ನು ಪ್ರೀತಿಸುತ್ತಿಲ್ಲವೇನು ? ನನಗೋಸ್ಕರ ಯಾರು ಒಂದಿಷ್ಟನ್ನಾದರೂ ಮಾಡುವರೋ, ಅವರನ್ನು ನಾನು ಪ್ರೀತಿಸುತ್ತೇನೆ. ನೀನಾದರೆ ಎಷ್ಟೊಂದು ಮಾಡುತ್ತಿದ್ದೀಯ ! ಮನೆಯಲ್ಲಿ ನಾನು ಯಾವುದೇ ವಸ್ತುವನ್ನು ಮುಟ್ಟಲಿ, ನಿನ್ನ ನೆನಪಾಗುತ್ತದೆ. ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ಆದರೆ ಈ ಶರೀರವನ್ನು ಹೊತ್ತುಕೊಂಡು ನನಗೆ ಹೆಚ್ಚೇನೂ ಪ್ರೀತಿ ತೋರಿಸಲು ಸಾಧ್ಯವಿಲ್ಲ. ಹಾಗೆ ಮಾಡುವುದು ಒಳ್ಳೆಯದೇ ಹೇಳು ? ನೀವೆಲ್ಲ ಇಲ್ಲಿದ್ದೀರಿ, ಆಗಾಗ ನಿಮ್ಮ ನೆನಪಾಗುತ್ತದೆ. ಆದರೆ ಯಾರು ದೂರವಿದ್ದಾರೋ ಅವರಿಗಾಗಿ ಶ್ರೀರಾಮಕೃಷ್ಣರನ್ನು ಪ್ರಾರ್ಥಿಸಿಕೊಳ್ಳುತ್ತೇನೆ, ‘ಠಾಕೂರ್, ಅವರನ್ನು ನೀವು ಚೆನ್ನಾಗಿ ನೋಡಿಕೊಳ್ಳಿ. ನನಗೆ ಅವರೆಲ್ಲರ ನೆನಪು ಉಳಿಯುವುದಿಲ್ಲ ’ ಅಂತ.

* * *

ಶಿಷ್ಯನು ಭಕ್ತರ ಪತ್ರಗಳನ್ನು ಓದಿ ಹೇಳುತ್ತಿದ್ದ. ಕೃಷ್ಣಲಾಲ್ ಮಹಾರಾಜ್ ಕೂಡ ಇದ್ದರು. ಮನಸ್ಸು ಸ್ಥಿರವಾಗುತ್ತಿಲ್ಲ ಇತ್ಯಾದಿ ವಿಷಯಗಳನ್ನು ಪತ್ರದಲ್ಲಿ ಬರೆದಿದ್ದರು. ಇದನ್ನೆಲ್ಲ ಕೇಳಿದ ಶ್ರೀಮಾತೆ ಉತ್ಸಾಹದಿಂದ ಹೇಳತೊಡಗಿದರು, ‘‘ಪ್ರತಿದಿನವೂ ಹದಿನೈದು-ಇಪ್ಪತ್ತು ಸಾವಿರ ಜಪ ಮಾಡಲು ಸಾಧ್ಯವಾದರೆ ಮನಸ್ಸು ಸ್ಥಿರವಾಗುವುದು. ಕೃಷ್ಣಲಾಲ್, ನಿಜವಾಗಿಯೂ ನಾನು ನೋಡಿದ್ದೇನೆ, ಹಾಗಾಗುತ್ತದೆ. ಮೊದಲು ಅಷ್ಟನ್ನು ಮಾಡಿ ನೋಡಲಿ. ಅಷ್ಟಾಗಿಯೂ ಮನಸ್ಸು ಸ್ಥಿರವಾಗದಿದ್ದರೆ ಅನಂತರ ಹೇಳಲಿ. ಆಗ ಇನ್ನೂ ಒಂದಿಷ್ಟು ಮನಸ್ಸು ಕೊಟ್ಟು ಜಪ ಮಾಡಬೇಕು. ಆದರೆ ಹಾಗಿಲ್ಲ, ಯಾರೂ ಆ ರೀತಿ ಮಾಡಲಾರರು ; ಬರೀ ‘ಯಾಕೆ ಸಾಧ್ಯವಾಗುತ್ತಿಲ್ಲ ?’ ಎಂದು ಕೇಳುತ್ತಾರೆ.’’

**‘ಶ್ರೀಶಾರದಾದೇವಿ ವಚನವೇದ’** ದಿಂದ, ಪು.೨೭೦-೭೧